ಬಂದೀಖಾನೆಗಳಲ್ಲಿ ಕೈದಿಗಳಿಗೆ ಹೆಚ್ಚಿನ ಸೌಲಭ್ಯ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 57(515)

ಸದಸ್ಯರ ಹೆಸರು ಶ್ರೀ ಗುರುಸ್ವಾಮಿ ಎ ಎಸ್ (ಚಾಮುಂಡೇಶ್ವರಿ)

ಉತ್ತರಿಸುವ ಸಚಿವರು ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು)

ಪ್ರಶ್ನೆ

1) ಬಂದೀಖಾನೆಗಳಲ್ಲಿ ಕೈದಿಗಳಿಗೆ ಹೆಚ್ಚಿನ ಸೌಲಭ್ಯ ಒದಗಿಸಲು ಈವರೆವಿಗೆ ಸರ್ಕಾರದ ಕೈಸೇರಿರುವ ವರದಿಗಳೆಷ್ಟು? ಅವುಗಳ ಮುಖ್ಯಾಂಶವೇನು?

2) ಇವುಗಳಲ್ಲಿ ಎಷ್ಟನ್ನು ಜಾರಿಗೆ ತರಲಾಗಿದೆ?

ಉತ್ತರ

1) ಬಂದೀಖಾನೆಗಳಲ್ಲಿ ಕೈದಿಗಳಿಗೆ ಹೆಚ್ಚಿನ ಸೌಲಭ್ಯ ಒದಗಿಸುವ ವಿಷಯದಲ್ಲಿ ಈವರೆವಿಗೆ ಒಂದು ವರದಿಯು ಸರ್ಕಾರದ ಕೈ ಸೇರಿದೆ

ವರದಿಯ ಮುಖ್ಯಾಂಶಗಳು

ಬಂದಿಗಳಿಗೆ ಕಾರಾಗೃಹಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಸಮರ್ಪಕವಾಗಿ ಒದಗಿಸುವುದು, ಬಂಧನದ ಅವಧಿಯಲ್ಲಿ ಬಂಧಿಗಳಿಗೆ ವೃತ್ತಿಪರ ತರಬೇತಿ ನೀಡುವುದು ಕಾರಾಗೃಹಗಳಲ್ಲಿ ಶಿಸ್ತು ಮತ್ತು ಭದ್ರತೆ ಕಾಪಾಡುವುದು, ಮಹಿಳಾ ಬಂಧಿಗಳಿಗೆ ಹೆಚ್ಚಿನ ಸೌಲಭ್ಯಗಳು, ಸಜಾ ಬಂಧಿಗಳಿಗೆ ಮಾಫಿ ಪದ್ಧತಿ ಅನುಸರಿಸುವುದು, ವೆರೋಲ್, ವೆರ್ಲೋ ನೀಡುವುದು ಅರ್ಹ ಬಂಧಿಗಳ ಅವಧಿ ಪೂರ್ವ ಬಿಡುಗಡೆ ಮಾಡುವುದು, ಬಂಧಿಗಳ ವರ್ಗೀಕರಣ ಮತ್ತು ವ್ರತ್ಯೇಕತೆ ಮಾಡುವುದು, ಕಾರಾಗೃಹಗಳಲ್ಲಿ ಬಂಧಿಗಳ ದಟ್ಟಣೆ ಕಡಿಮೆ ಮಾಡುವುದು

2) ಸರ್ಕಾರಕ್ಕೆ ಕೈಸೇರಿರುವ ವರದಿಯಲ್ಲಿ ಒಟ್ಟು 658 ಶಿಫಾರಸ್ಸುಗಳಿದ್ದು, ಅದರಲ್ಲಿ 200 ಶಿಫಾರಸ್ಸುಗಳನ್ನು ರಾಜ್ಯಮಟ್ಟದ ಸಮಿತಿ ಪರಿಶೀಲಿಸಿ 76ನ್ನು ಅನುಷ್ಠಾನಗೊಳಿಸಿದೆ ಉಳಿದ 458 ಶಿಫಾರಸ್ಸುಗಳನ್ನು ಪರಿಶೀಲಿಸಬೇಕಾಗಿರುತ್ತದೆ